# ಹೌದು ಹುಲಿಯಾ!

## ಉಡುಪಿನಲ್ಲಿ ಪ್ರಾಣಿಗಳ ಚಿತ್ತಾರ



ಫ್ಯಾಷನ್‌ಪ್ರಪಂಚದಲ್ಲಿ ಪ್ರಾಣಿಗಳು ಸದ್ದು ಮಾಡಲಾರಂಭಿಸಿವೆ. ಜೀಬ್ರಾ, ಚಿರತೆ, ಜಿರಾಫೆಗಳಂತಹ ಪ್ರಾಣಿಗಳ ತೊಗಲನ್ನೇ ಹೋಲುವ ವಿನ್ಯಾಸದ ಉಡುಪುಗಳು ಇದೀಗ ಫ್ಯಾಷನ್ ಟ್ರೆಂಡ್ ಆಗಿವೆ. ಇದರ ಜೊತೆಗೆ ಆ್ಯಕ್ಸೆಸರೀಸ್, ಸೌಂದರ್ಯವರ್ಧಕಗಳೂ ಸೇರಿಕೊಂಡು ಫ್ಯಾಷನ್ ದುನಿಯಾ ಅನಿಮಲ್ ವರ್ಲ್ಡ್ ಆಗಿ ಪರಿವರ್ತಿತವಾದಂತಿದೆ.

■ ಸುಲಭಾ ಆರ್. ಭಟ್





ಫ್ಯಾಷನ್‌ಗೂ ಪ್ರಾಣಿಗಳಿಗೂ ಸಂಬಂಧವಿದೆಯೇ? ಹೌದು, ಇದೆ ಎನ್ನುತ್ತದೆ ಫ್ಯಾಷನ್ ಪ್ರಪಂಚ. ಈ ಮಾತನ್ನು ಸ್ಪಷ್ಟೀಕರಿಸುವುದು ವಿವಿಧ ಪ್ರಾಣಿಗಳನ್ನು ಹೊತ್ತ ಉಡುಪುಗಳನ್ನು ನೋಡಿದಾಗ. ಇಲ್ಲಿ ಜೀಬ್ರಾ, ಚಿರತೆ, ಹುಲಿ ಮುಂತಾದ ಪ್ರಾಣಿಗಳ ತೊಗಲು ಉಡುಪು ಹಾಗೂ ಫ್ಯಾಷನ್ ಆ್ಯಕ್ಸೆಸರಿಗಳಾಗಿ ರಾರಾಜಿಸುತ್ತಿದೆ. ಅಲ್ಲದೆ ಇವೆಲ್ಲವೂ ಫ್ಯಾಷನ್ ಟ್ರೆಂಡ್ ಕೂಡ ಆಗಿವೆ.

ಹಾಗೆ ನೋಡಿದರೆ ಫ್ಯಾಷನ್ ಪ್ರಪಂಚ ಯಾವಾಗಲೂ ಪರಿಸರ ಸ್ನೇಹಿ (ನೇಚರ್ ಫ್ರೆಂಡ್ಲಿ)ಯೇ ಆಗಿದೆ. ಪ್ರಾಣಿಗಳ ಚರ್ಮದಂತೆ ಕಾಣುವ ಉಡುಗೆ ಮಕ್ಕಳಿಗಂತೂ ಬಹಳ ಇಷ್ಟ. ಎನಿಮಲ್ ಪ್ರಿಂಟೆಡ್ ಕಾಸ್ಟ್ಯೂಮ್ ಅನ್ನು ಮಕ್ಕಳು ಎಂದಿಗೂ ಇಷ್ಟಪಡುವವರೇ.

ಈ ಫ್ಯಾಷನ್ ದುನಿಯಾನೇ ಹಾಗೆ. ಹಲವಾರು ವರ್ಷಗಳಿಂದ ಪ್ರಚಲಿತದಲ್ಲಿದ್ದು ಜನಪ್ರಿಯತೆ ಪಡೆದಿದ್ದರೂ ಅದರಲ್ಲೇ ಏನೋ ಹೊಸತನವೂ ಅಡಗಿರುತ್ತದೆ. ನಿತ್ಯವೂ ಫ್ಯಾಷನ್ ಲೋಕ ಅಪ್‌ಡೇಟ್ ಆಗುತ್ತಲೇ ಇರುತ್ತದೆ. ಕೆಲವೊಂದು ಹಳೆಯ ಫ್ಯಾಷನ್‌ಗೆ ಹೊಸ ಟಚ್‌ಅಪ್ ಕೂಡ ಸೇರಿ ಅದು 'ಎಲ್ಲದರೊಳಗೊಂದಾಗುತ್ತದೆ'.

ಇದೀಗ ಫ್ಯಾಷನ್‌ಲೋಕಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಪ್ರಾಣಿಗಳ ತೊಗಲಿನ ಮಾದರಿಯ ಉಡುಗೆಯನ್ನೇ ನೋಡಿ. ಅಪ್ಪಟ ಪ್ರಾಣಿಯನ್ನೇ ಹೋಲುವ ಈ ಉಡುಗೆ ಹಾಗೂ ಆ್ಯಕ್ಸೆಸ್ಸರಿಗಳು ಆಧುನಿಕ ಮನೋಭಾವದವರ ಮೆಚ್ಚು ಕೂಡ ಆಗಿದೆ. ಪ್ರಕೃತಿದತ್ತವಾಗಿ ಪ್ರಾಣಿಗಳ ಚರ್ಮ ಹೇಗಿರುತ್ತದೋ ಆ ಡಿಸೈನ್ ಈಗ ಬಟ್ಟೆಗಳ ಮೇಲೂ ಪ್ರಿಂಟ್ ಆಗಿ ಪಡಿಮೂಡುತ್ತಿದೆ. ಅಲ್ಲದೆ ಅದು ಫ್ಯಾಷನ್ ಪ್ರಿಯರ ಮನಸ್ಸನ್ನೂ ಸೆಳೆಯುತ್ತಿದೆ. ಪ್ರಾಣಿಗಳ